ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಸಾರಿಗೆ ಇಲಾಖೆಗೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಕಛೇರಿಗಳು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರವಿದ್ದು, ತಾಲ್ಲೂಕು ಪಂಚಾಯತಿ ಸಮಿತಿಯ ಮಟ್ಟದಲ್ಲಿ ಇರುವುದಿಲ್ಲ. ಕೆಲವು ಜಿಲ್ಲೆಗಳಲ್ಲಿ ಉಪ ವಿಭಾಗದ ಮಟ್ಟದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳಿದ್ದು, ಅಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಇರುವರೇ ಹೊರತು, ತಾಲ್ಲೂಕು ಮಟ್ಟದಲ್ಲಿ ನಮ್ಮ ಯಾವ ಅಧಿಕಾರಿಗಳು ಇರುವುದಿಲ್ಲ. ಆದುದರಿಂದ ಹೋಬಳಿ ಮಟ್ಟದ ಜನಸಂಪರ್ಕ ಸಭೆಗೆ ಪ್ರಾದೇಶಿಕ ಸಾರಿಗೆ ಕಛೇರಿಯಿಂದ ಯಾರೂ ಹೋಗುವ ಸಾಧ್ಯತೆ ಇರುವುದಿಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಧಿಕಾರಿಗಳು ತಾಲ್ಲೂಕಾ ಪಂಚಾಯಿತಿ ಸಭೆ ಹಾಗೂ ಶಾಸಕರು ಕರೆಯುವ ಹೋಬಳಿ ಮಟ್ಟದ ಜನಸಂಪರ್ಕ ಸಭೆಗಳಿಗೆ ಮೀಟಿಂಗ್ ನೋಟೀಸುಗಳು ಮುಂಚಿತವಾಗಿ ತಲುಪಿದಲ್ಲಿ ಹಾಜರಾಗಿರುತ್ತಾರೆ. ಮೀಟಿಂಗ್ ನೋಟೀಸುಗಳು ತಲುಪದೇ ಇರುವ ಹಾಗೂ ಕೆಲಸದ ಒತ್ತಡಗಳು ಇದ್ದಂತಹ ಸಂದರ್ಭದಲ್ಲಿ ಗೈರುಹಾಜರು ಇರುತ್ತಾರೆ.

ಆ) ಇಲ್ಲ

ಇ) ಸಂಬಂಧಪಟ್ಟವರಿಂದ ಈ ಬಗ್ಗೆ ದೂರುಗಳು ಬಂದಲ್ಲಿ ಅದಕ್ಕೆ ಸಂಬಂಧಪಟ್ಟ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಂದ ವಿವರಣೆಯನ್ನು ಸಂಸ್ಥೆಯು ಪಡೆಯುವುದು ಮತ್ತು ಸಭೆಗಳಿಗೆ ನಿಯಮಿತವಾಗಿ ಹಾಜರಾಗಲು ಸೂಕ್ತ ನಿರ್ದೇಶನವನ್ನು ನೀಡಲಾಗುತ್ತಿದೆ.

ಈ) ಸಭೆಗಳಿಗೆ ಗೈರುಹಾಜರಾದವರ ಬಗ್ಗೆ ನೀಡಿದ ವಿವರಣೆ ಸಮರ್ಪಕ ಇಲ್ಲದಿದ್ದಲ್ಲಿ ಅಂತಹವರ ಮೇಲೆ ಸೂಕ್ತ ಕ್ರಮವನ್ನು ಜರುಗಿಸಲಾಗುವುದು.

ವಿಷಯ : ಕೈಗಾರಿಕಾ ಭೂ ಮಂಜೂರಾತಿ.

Q : 182

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ.ಐ.ಎ.ಡಿ.ಬಿ.ಯವರು ವೈಟ್‌ಫೀಲ್ಡ್ ಮತ್ತು ಬೊಮ್ಮಸಂದ್ರ ಕೈಗಾರಿಕೆಯ 5 ಎಕರೆ ಭೂಮಿಯನ್ನು ಎಷ್ಟು ಕೈಗಾರಿಕಾ ಉದ್ದಿಮೆಗಳಿಗೆ ಕೊಟ್ಟಿರುವರು?

ಆ) ಆ ಭೂಮಿಯನ್ನು ಎಷ್ಟು ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯ ಮಾಡಬೇಕಾಗಿದೆ?

ಇ) ಆ ಅವಧಿಯೊಳಗೆ ಅಭಿವೃದ್ಧಿ ಕಾರ್ಯ ಮಾಡದೇ ಇದ್ದಲ್ಲಿ, ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದೇ;

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿಯು ವೈಟ್‌ಫೀಲ್ಡ್ ಕೈಗಾರಿಕಾ ಕ್ಷೇತ್ರದಲ್ಲಿ 822 ಎಕರೆಯನ್ನು ಹಾಗೂ ಬೊಮ್ಮಸಂದ್ರ ಕೈಗಾರಿಕಾ ಕ್ಷೇತ್ರದಲ್ಲಿ 900 ಎಕರೆಯನ್ನು ಅಭಿವೃದ್ಧಿ ಪಡಿಸಿ ಕೈಗಾರಿಕಾ ನಿವೇಶನಗಳನ್ನು ವಿವಿಧ ಕೈಗಾರಿಕಾ ಉದ್ಯಮಿಗಳಿಗೆ ಹಂಚಿಕೆ ಮಾಡಲಾಗಿದೆ. ಸದರಿ ಕೈಗಾರಿಕಾ ಪ್ರದೇಶಗಳಲ್ಲಿ 5 ಎಕರೆ ಅಥವಾ ಹೆಚ್ಚಿಗೆ ಹಂಚಿಕೆ ಮಾಡಿರುವ ವಿವರ ಹೀಗಿದೆ;

ಕ್ರಮ ಸಂಖ್ಯೆ	ಕೈಗಾರಿಕಾ ಪ್ರದೇಶ	ಉದ್ಯಮಿಗಳ ಸಂಖ್ಯೆ	ವಿಸ್ತೀರ್ಣ
1.	ವೈಟ್‌ಫೀಲ್ಡ್	18	249.66 ಎಕರೆಗಳು
2.	ಬೊಮ್ಮಸಂದ್ರ	27	219.96 ಎಕರೆಗಳು

ಆ) ಹಂಚಿಕೆಯಾದ ಜಮೀನನ್ನು ಕೈಗಾರಿಕಾ ಉದ್ಯಮಿಗಳು ಎರಡು ವರ್ಷಗಳಲ್ಲಿ ಅಭಿವೃದ್ಧಿಪಡಿಸಿ ಉತ್ಪಾದನೆಯನ್ನು ಪ್ರಾರಂಭ ಮಾಡಬೇಕಾಗಿರುತ್ತದೆ. ಹಾಗೂ ಗುತ್ತಿಗೆ ಒಡಂಬಡಿಕೆ ಪ್ರಕಾರ ಉದ್ದಿಮೆಯ ವಿಸ್ತರಣೆಗೆ ಕಾಯ್ದಿರಿಸಿದ ಜಮೀನನ್ನು ಉತ್ಪಾದನೆ ಪ್ರಾರಂಭ ಮಾಡಿದ 5 ವರ್ಷಗಳಲ್ಲಿ ಅಭಿವೃದ್ಧಿ ಪಡಿಸಬೇಕಾಗಿರುತ್ತದೆ.

ಇ) ಜಮೀನನ್ನು ಸಕಾಲದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸದಿದ್ದಲ್ಲಿ ಗುತ್ತಿಗೆ ಒಡಂಬಡಿಕೆ ಪ್ರಕಾರ ಕಾನೂನಿನಂತೆ ಕ್ರಮ ಕೈಗೊಂಡು ಜಮೀನನ್ನು ಹಿಂತೆಗೆದುಕೊಳ್ಳಲಾಗುವುದು.

ಅಗತ್ಯವಿದ್ದಲ್ಲಿ, ಉದ್ಯಮಿಗಳಿಗೆ ಜಮೀನನ್ನು ಸಕಾಲದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಪ್ರಾಮಾಣಿಕ ತೊಂದರೆಗಳಿದ್ದಲ್ಲಿ ಅವರು ಸಾಧಿಸಿದ ಕಾರ್ಯವನ್ನು ಪರಿಗಣಿಸಿ ಉತ್ಪಾದನೆ ಪ್ರಾರಂಭ ಮಾಡಲು ಮಂಡಳಿಯು ಸಮಯ ವಿಸ್ತರಣೆಯನ್ನು ನೀಡಲಾಗುವುದು.

ವಿಷಯ : ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ ಪ್ರಿ ಮೆಟ್ರಿಕ್ ಬಾಲಕರ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಬಗ್ಗೆ.

Q : 2277

ಶ್ರೀ ಎ. ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ದಾಪುರ ಗ್ರಾಮದಲ್ಲಿ ಬಾಲಕರ ಪ್ರಿಮೆಟ್ರಿಕ್ ಬಾಲಕರ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ಪ್ರಾರಂಭಿಸಲಾಗುವುದು?